
ಎರಚಿದ ಮಣ್ಣಿನ ನೀರಿನ ಚಿತ್ತಾರ ಮೂಡುತ್ತಿದ್ದವು. ಗಣಿ ಹತ್ತಿರ ಸುಮಾರು ಇಪ್ಪತ್ತು ಮೂವತ್ತು ಜನ ಸೇರಿದ್ದರು. ಪೊಲೀಸ್ ಜೀಪೊಂದು ಬಂದು ನಿಂತಿತ್ತು. ಹೆಣವನ್ನು ಮೇಲೆತ್ತುತ್ತಿದ್ದರು. ಮೀರಾ ಆ ಮುಖ ನೋಡುತ್ತಲೇ ಈ ಮುಖ ಎಲ್ಲೋ ನೋಡಿದ್ದಿನಲ್ಲಾ! ಎನ್ನಿಸಿತು. ಮರುಕ್ಷಣ ಆ ದಿನ ಬೀರಮ್ಮಕ್ಕನ ಮಗಳು ಬೇಬಿಯ ಜೊತೆ ಇದ್ದ ಆ ಹುಡುಗನೇ ಎಂಬುದು ಖಾತ್ರಿಯಾಯ್ತು. ಅಲ್ಲಿ ನೆರೆದವರೆಲ್ಲ ನಾನಾ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಮನೆಗೆ ಮರಳಿ ಬರುತ್ತಾ ಪಕ್ಕದ ಮನೆಯೇ ಆದ ಬೀರಮ್ಮಕ್ಕನ ಮನೆಗೆ ಹೋದಳು. ಹೊರಗೆ ಯಾರೂ ಕಾಣಿಸಲಿಲ್ಲ. ಸೀದಾ ಒಳನಡೆದಳು. ಅಷ್ಟರಲ್ಲಿ ಬೇಬಿ ಒಳಬಚ್ಚಲಿನಿಂದ ಹೊರಬಂದಳು. ತಲೆಸ್ನಾನ ಮಾಡಿ ಕೂದಲನ್ನು ಎತ್ತಿಕಟ್ಟಿದ್ದಳು. ಕೈಲ್ಲಿದ್ದ ಬಕೇಟಿನಲ್ಲಿ ಅಕೆಯ ಬಟ್ಟೆಗಳು ಇರುವುದು ಕಂಡಿತು. ಆಕೆಯನ್ನು ನೋಡಿದಾಗ ಮೈಕೈ ತುಂಬಿಕೊಂಡು ಗುಂಡಗಾದಂತೆ, ಹೊಟ್ಟೆ ಒಂದಿಷ್ಟು ದಪ್ಪಗಾದಂತೆ ತೋರಿತು. ಮೀರಾನ ನೋಡಿ ಸುಮ್ಮನೇ ಮಂದಹಾಸ ಬೀರಿ ಹೊರಹೊರಟಳು. ಅವಳ ಮುಖದಲ್ಲಿ ಗೆಲುವಿರಲಿಲ್ಲ. ಒಳನಡೆದಳು ಮೀರಾ. ಅಡುಗೆ ಕೋಣೆಯಲ್ಲಿ ಒಲೆಯ ಮುಂದೆ ಕೂತು ಬೀರಮ್ಮಕ್ಕ ಕಾದ ಬಳಪದ ಕಲ್ಲಿನ ಕಾವಲಿಗೆ ದೋಸೆಹಿಟ್ಟು ಹೊಯ್ದು ಮೇಲಿನಿಂದ ಮುರುಗಲ ಎಣ್ಣೆ ಚಮಚದಿಂದ ಸವರುತ್ತಾ ದೋಸೆ ಹದಕ್ಕೆ ಬರುತ್ತಿರುವುದನ್ನೇ ಕಾಯುತ್ತಾ ಕೂತಿದ್ದಳು. ಕಾವಲಿ ಒಂದು ಕಡೆ ಮುಕ್ಕಾಗಿತ್ತು. ಈ ಕಲ್ಲಿನ ಕಾವಲಿಯಲ್ಲಿ ದೋಸೆ ಹದವಾಗಿ ಬರುತ್ತದೆ. ಆದರೆ ಬಳಪದ ಕಲ್ಲು ಬಿದ್ದರೆ ಒಡೆದು ಹೋಗುವುದು ಗ್ಯಾರಂಟಿ. ನಾಜೂಕಿನಿಂದ ಸಂಭಾಳಿಸಿದರೆ ಮಾತ್ರ ಬಾಳಿಕೆ ಅದರದು. ಅದರಲ್ಲಿ ತೆಗೆದ ದೋಸೆಗೂ ಒಂದು ರೀತಿಯ ರುಚಿ ಬೇರೆಯೇ ಇರುತ್ತದೆ. ಆದರೂ ಮುಕ್ಕಾದ ಕಾವಲಿಯಲ್ಲೇ ಬೀರಮ್ಮಕ್ಕ ದೋಸೆ ಹೊಯ್ಯುತ್ತಿದ್ದಳು. ಒಂದೆರಡು ದೋಸೆಗಳು ಆಗಲೇ ಸಿದ್ಧವಾಗಿ ದೋಸೆ ಹಚ್ಚಿಗೆಯಲ್ಲಿದ್ದವು. ಬೀರಮ್ಮಕ್ಕ ಕಾಲಿಗೆ ಏನೋ ಕಟ್ಟಿಕೊಂಡಿದ್ದಳು. ಇನ್ನೊಂದು ಕೈಯಲ್ಲಿ ಎಣ್ಣೆ ಬಿಸಿಮಾಡಿ ಅರಿಸಿನ ಸೇರಿಸುತ್ತಿದ್ದಳು.

'ಬೀರಮ್ಮಕ್ಕ. ದೋಸೆ ಹೊಯ್ಯತಿಂವೆ ಏನೆ? ನಿಂಗೆ ಗುತ್ತಾಗಿದೇ? ಅಲ್ಲಿ ಕಣಿ ಗುಂಡಿಲೀ ಆ ಕಂಪನಿಗೀ ಬಂದ ಇಂಜಿನಿಯರ್ ಇದ್ನಲ್ಲೆ, ಆಂವ್ ಸತ್ತ ಬಿದ್ಯಾ! ಪಾಪ! ಎಲ್ಲಿಂದ ಬಂದೀ ಎಲ್ಲ್ ಸಾಯುದಾಯ್ತು ನೋಡು!' ಎಂದಳು ಮೀರಾ. ಒಂದರೆಗಳಿಗೆ ಮೌನವಾಗಿ ಒಲೆಯ ನಿಗಿನಿಗಿ ಬೆಂಕಿಯನ್ನೇ ದಿಟ್ಟಿಸಿ, ಇನ್ನೆರಡು ತುಂಡು ಸೌದೆಗಳ ಒಲೆಗೆ ತುರುಕಿದಳು ಬೀರಮ್ಮಕ್ಕ. 'ಎಲ್ಲ ಹಣೆಬರಹನೇ ಮೀರಾ!. ಇದ್ನೋಡು ನಂಗೀ ಕಾಲೀಗೆ ಆದ ಗಾಯ ಮಾಣುಕೂ ಮುದ್ಲೇ ಈ ಮಗು ಕೈಗೆ ಗಾಯ ಮಾಡ್ಕಂಡಿದು! ನನ್ನ ಗಾಯ ಅಂತೂ ಒಣದಂಗ್ಹಾತಿದು, ಮತ್ತೀ ಹಸಿಯಾತಿದು. ಈ ಮಗೀಂದರೂ ಬ್ಯಾಗೇ ಒಣ್ಗಿ ಹೋಗಲೀ, ದ್ಯಾವ್ರೇ! ಮೀರಾ! ಬೆಟ್ಟದ ಮ್ಯಾನಿ ಕೂಂತವ್ನೇ ನೀನೇ ನೊಡ್ಕಾ. ಅಂದಿ ದ್ಯಾವರಿಗೆ ಜೋಡಿ ಘಂಟಿ ಹರಕೆ ಹೊತ್ತಕಂಡಿ ನಾನು' ಎಂದಳು. ಮತ್ತೇ 'ಇಕಾ! ದೋಸಿ



ತಿನ್ನು ಬಾ! ಎಂದು ಹಚ್ಚಿಗೆಯಿಂದ ದೋಸೆ ತಟ್ಟೆಗೆ ಹಾಕತೊಡಗಿದಳು. ತಾನು ಹೇಳಿದ್ದಕ್ಕೂ ಬೀರಮ್ಮಕ್ಕ ಹೇಳುತ್ತಿರುವುದಕ್ಕೂ ತಾಳೆಯಿಲ್ಲವಲ್ಲ ಎಂದೆನ್ನಿಸಿತು ಮೀರಾಗೆ. ಹಾಗಾಗಿ ಗೊಂದಲದ ಗೂಡೊಂದು ತಲೆಯಲ್ಲಿ ತೂಗುತ್ತಿತ್ತು. 'ಬ್ಯಾಡ ಈಗೇ! ತಡ ಆಯ್ತು. ನಂಗೂ ದೋಸೆ ಹೊಯ್ಯದಿದು. ನಿಂಗೇ ಸುದ್ದಿ ಗುತ್ತಾಗಿದೋ ಇಲ್ವೋ ಅಂದ್ಕಂಡೀ ಹೇಳಿ ಹೋಗುಕೆ ಬಂದಿತೇ! ಹೋತೇ ನಾನು.' ಎನ್ನುತ್ತಾ ಮೀರಾ ಹೊರಬಿದ್ದಳು. ಬೀರಮ್ಮಕ್ಕ ಒಮ್ಮೆ ಉರಿವ ಬೆಂಕಿಯನ್ನು ಇನ್ನೊಮ್ಮೆ ತನ್ನ ಕಾಲಿನ ಹಸಿಗಾಯವನ್ನು ದಿಟ್ಟಿಸಿ ನೋಡತೊಡಗಿದಳು.

●